**All India Radio: Bangalore**
**National Bulletin In Kannada**
**23.03.2025 19.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಹುತಾತ್ಮ ದಿನದ ಸಂದರ್ಭದಲ್ಲಿ ಮಹನೀಯರ ತ್ಯಾಗ ಬಲಿದಾನಗಳ ಸಂಸ್ಮರಣೆ, ರಾಷ್ಟ್ರದ ಗೌರವ ನಮನ ; ಹುತಾತ್ಮರ ಜೀವನ ಯುವ ಜನತೆಗೆ ಸ್ಫೂರ್ತಿ - ಪ್ರಧಾನಿ ನರೇಂದ್ರ ಮೋದಿ
2. ಮುಂಬರುವ ದಶಕಗಳಿಗೆ ಸೂಕ್ತವಾದ ಇಂಧನ ಪರಿಸರ ಖಾತರಿಪಡಿಸುವುದು ಭಾರತದ ಪ್ರಮುಖ ರಾಜತಾಂತ್ರಿಕ ಉದ್ದೇಶ - ಸಚಿವ ಎಸ್. ಜೈಶಂಕರ್
3. ರಾಷ್ಟ್ರೀಯ ಸ್ವಯಂ ಸೇವಕ ಸಂಘ - ಆರ್‌ಎಸ್‌ಎಸ್ ಸಂಸ್ಥಾಪನಾ ಶತಮಾನೋತ್ಸವ ; ವಿವಿಧ ಜನಸಂಪರ್ಕ ಕಾರ್ಯಕ್ರಮ ಆಯೋಜನೆ
4. ಛತ್ತೀಸ್‌ಗಢದಲ್ಲಿಂದು ೨೨ ನಕ್ಸಲರ ಶರಣಾಗತಿ
5. ಐಪಿಎಲ್ ಕ್ರಿಕೆಟ್ ; ದಿನದ ಮೊದಲ ಪಂದ್ಯದಲ್ಲಿ ರಾಜಸ್ತಾನ್ ರಾಯಲ್ಸ್ ವಿರುದ್ಧ ಸನ್ ರೈಸರ್ಸ್ ಹೈದರಾಬಾದ್ ಜಯ

<><><><>

ಹುತಾತ್ಮರ ದಿನದ ಸಂದರ್ಭದಲ್ಲಿ ಇಂದು ತ್ಯಾಗ ಬಲಿದಾನಗಳನ್ನು ಮಾಡಿದ ಮಹನೀಯರಿಗೆ ದೇಶಾದ್ಯಂತ ಗೌರವ ನಮನ ಸಲ್ಲಿಸಲಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮರಾದ ಭಗತ್‌ಸಿಂಗ್ ಸುಖದೇವ್ ಹಾಗೂ ರಾಜ್‌ಗುರು ಅವರ ನೆನಪಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೋ ಹಂಚಿಕೊಂಡಿರುವ ಪ್ರಧಾನಮಂತ್ರಿಯವರು ಈ ಕ್ರಾಂತಿಕಾರಿ ಧುರೀಣರು ಮಾಡಿದ ಅಪ್ರತಿಮ ತ್ಯಾಗವನ್ನು ಸ್ಮರಿಸಿದ್ದಾರೆ. ಅವರ ತ್ಯಾಗ ಬಲಿದಾನಗಳು ಯುವಪೀಳಿಗೆಗೆ ಸ್ಫೂರ್ತಿಯಾಗಿವೆ ಎಂದು ತಿಳಿಸಿದ್ದಾರೆ. ಮುಂಬೈನ ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರು, ಈ ಮೂವರು ಮಹನೀಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ನಾಸಿಕ್‌ನ ಸರ್ಕಾರಿ ಅತಿಥಿಗೃಹದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹುತಾತ್ಮರಿಗೆ ಗೌರವ ಸಲ್ಲಿಸಿದರು.

<><><>

ಮುಂಬರುವ ದಶಕಗಳಿಗೆ ಸೂಕ್ತವಾದ ಇಂಧನ ಪರಿಸರ ಖಾತರಿಪಡಿಸುವುದು ಭಾರತದ ಪ್ರಮುಖ ರಾಜತಾಂತ್ರಿಕ ಉದ್ದೇಶವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಮುಂಬೈನಲ್ಲಿ ಮಾಧ್ಯಮ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಿಶ್ವ ಹಿಂದು ಔದ್ಯಮಿಕ ನೀತಿ ರಫ್ತು ನಿಯಂತ್ರಣ ಮತ್ತು ಬೆಲೆ ನಿಗದಿ ಸವಾಲುಗಳನ್ನು ಎದುರಿಸುತ್ತಿದೆ. ವಿಶ್ವದ ೫ನೇ ಅತಿದೊಡ್ಡ ಆರ್ಥಿಕತೆಯಾದ ಭಾರತ ವ್ಯಾಪಕ ಆಧಾರದ ವೈವಿಧ್ಯಮಯ ಇಂಧನ ಸಂಬಂಧಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಬೇಕಿದೆ ಎಂದರು.

ಸಬ್ ಕಾ ಸಾತ್ ಸಬ್ ಕಾ ವಿಕಾಸ್ - ಎಲ್ಲರೊಂದಿಗೆ ಎಲ್ಲರ ವಿಕಾಸ ಧ್ಯೇಯವಾಕ್ಯ ವಿದೇಶಾಂಗ ನೀತಿಗೂ ಅನ್ವಯವಾಗುತ್ತಿದ್ದು, ಈ ನಿಟ್ಟಿನಲ್ಲಿ ಭಾರತ ವಿವಿಧ ದೇಶಗಳೊಂದಿಗೆ ಅಭಿವೃದ್ಧಿಯಲ್ಲಿ ತೊಡಗಿದೆ. ರಷ್ಯಾ ಮತ್ತು ಉಕ್ರೇನ್, ಇಸ್ರೇಲ್ ಮತ್ತು ಇರಾನ್, ಡೆಮಾಕ್ರಟಿಕ್ ವೆಸ್ಟ್ ಮತ್ತು ಗ್ಲೋಬಲ್ ಸೌತ್ ಹಾಗೂ ಬ್ರಿಕ್ಸ್ ಮತ್ತು ಕ್ವಾಡ್ ದೇಶಗಳೊಂದಿಗೆ ಸಮಾನಂತರವಾಗಿ ವ್ಯವಹರಿಸುತ್ತಿದೆ. ರಕ್ಷಣೆ ಮತ್ತು ಭದ್ರತೆಯಂತಹ ಸಂವೇದನಾ ಕ್ಷೇತ್ರಗಳಲ್ಲಿಯೂ ನಮ್ಮ ಸಶಸ್ತಪಡೆ ಹಾಗೂ ವ್ಯಾಪಾರ ಆಸಕ್ತಿ ವ್ಯಾಪಕ ಸಾಧ್ಯತಾ ಆಯ್ಕೆಯ ಸಹಭಾಗಿತ್ವ ಹೊಂದುವುದನ್ನು ಭಾರತದ ರಾಜನೀತಿ ಖಾತರಿಪಡಿಸುತ್ತದೆ ಎಂದು ವಿದೇಶಾಂಗ ಖಾತೆ ಸಚಿವ ಜೈಶಂಕರ್ ತಿಳಿಸಿದರು.

<><><>

ದಕ್ಷಿಣ ಆಫ್ರಿಕಾದ ಫಿಯೋನಿಕ್ಸ್ ಸೆಟಲ್‌ಮೆಂಟ್ ಟ್ರಸ್ಟ್ - ಗಾಂಧೀ ಡೆವಲೆಪ್‌ಮೆಂಟ್ ಟ್ರಸ್ಟ್ ಪ್ರಾಧಿಕಾರವು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರಿಗೆ ಸಂಬಂಧಿಸಿದ ವಿವಿಧ ದಾಖಲೆ ಹಾಗೂ ಅವರು ಬಳಸಿದ ವಸ್ತುಗಳನ್ನು ನವದೆಹಲಿಯಲ್ಲಿರುವ ರಾಷ್ಟ್ರೀಯ ಗಾಂಧಿ ವಸ್ತು ಸಂಗ್ರಹಾಲಯಕ್ಕೆ ಇಂದು ಹಸ್ತಾಂತರಿಸಿತು. ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ. ಎಸ್. ಜೈಶಂಕರ್ ಉಪಸ್ಥಿತಿಯಲ್ಲಿ ಈ ಹಸ್ತಾಂತರ ಕಾರ್ಯ ನಡೆಯಿತು. ಮಹಾತ್ಮಾಗಾಂಧಿಯವರು ಸ್ವತಃ ಕೈಯಲ್ಲಿ ನೇಯ್ದ ಬಟ್ಟೆ ಸೇರಿದಂತೆ ವಿವಿಧ ವಸ್ತುಗಳು ಇದರಲ್ಲಿ ಸೇರಿವೆ. ೧೮೯೩ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದ ಬಾಪು ಅವರು, ಡರ್ಬನ್‌ನಲ್ಲಿ ದೀರ್ಘಕಾಲ ನೆಲೆಸಿ ೧೯೦೦ಳರಲ್ಲಿ ಫಿಯೋನಿಕ್ಸ್

ಸೆಟಲ್‌ಮೆಂಟ್ ಸ್ಥಾಪಿಸಿದ್ದರು. ಭಾರತ ಹಾಗೂ ದಕ್ಷಿಣ ಆಫ್ರಿಕಾ ನಡುವಿನ ಹಾರ್ದಿಕ ಸಂಬಂಧದ ಹಿನ್ನೆಲೆಯಲ್ಲಿ ಫಿಯೋನಿಕ್ಸ್ ಸೆಟಲ್‌ಮೆಂಟ್ ಟ್ರಸ್ಟ್ ಹಾಗೂ ಗಾಂಧೀ ಡೆವಲೆಪ್‌ಮೆಂಟ್ ಟ್ರಸ್ಟ್ ತಮ್ಮಲ್ಲಿರುವ ಕೆಲವು ವಸ್ತುಗಳನ್ನು ಭಾರತಕ್ಕೆ ದಾನ ಮಾಡಲು ಮುಂದಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೃತಕ ಬುದ್ಧಿಮತ್ತೆ ಸಂಶೋಧಕ ಹಾಗೂ ಪಾಡ್‌ಕ್ಯಾಸ್ಟರ್ ಲೆಕ್ಸ್ ಫ್ರೀಡ್‌ಮನ್ ಜೊತೆ ಇತ್ತೀಚೆಗೆ ನಡೆಸಿದ ಪಾಡ್‌ಕ್ಯಾಸ್ಟ್ ಇದೀಗ ವಿವಿಧ ಭಾಷೆಗಳಲ್ಲಿ ಲಭ್ಯವಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಾಮಾಜಿಕ ಪೋಸ್ಟ್‌ನಲ್ಲಿ ಈ ವಿಚಾರ ತಿಳಿಸಿದ್ದು, ವಿಸ್ತೃತ ವ್ಯಾಪ್ತಿಯ ಶ್ರೋತೃಗಳಿಗೆ, ಸಂಭಾಷಣೆ ಲಭ್ಯವಾಗುವಂತೆ ಮಾಡುವುದು ಇದರ ಉದ್ದೇಶವಾಗಿದೆ ಎಂದಿದ್ದಾರೆ.

<><><>

ದೆಹಲಿ ವಿಧಾನಸಭೆಯ ಬಜೆಟ್ ಅಧಿವೇಶನ ನಾಳೆ ಆರಂಭವಾಗಲಿದೆ. ತಾತ್ಕಾಲಿಕ ವೇಳಾಪಟ್ಟಿಯಂತೆ ಈ ತಿಂಗಳ ೨೮ರವರೆಗೆ ಕಲಾಪ ನಿಗದಿಯಾಗಿದೆ. ಡಿಟಿಸಿ ಕಾರ್ಯನಿರ್ವಹಣೆ ಕುರಿತ ಸಿಎಜಿ ವರದಿಯನ್ನು ನಾಳೆ ಸದನದಲ್ಲಿ ಮಂಡಿಸಲಾಗುವುದು. ನಾಡಿದ್ದು ಮಂಗಳವಾರ ಬಜೆಟ್ ಮಂಡನೆಯಾಗಲಿದೆ. ಬಜೆಟ್ ಹಾಗೂ ವಿವಿಧ ಇಲಾಖೆಗಳಿಗೆ ನಿಗದಿಯಾದ ಹಣದ ಬಟವಾಡೆ ಮತ್ತು ನೀತಿ ಉಪಕ್ರಮಗಳ ಬಗ್ಗೆ ೨೬ ರಿಂದ ಚರ್ಚೆ ನಡೆಯಲಿದೆ.

<><><>

ಗಾಜಿಯಾಬಾದ್ ಮತ್ತು ಜಮ್ಮು ನಡುವಿನ ಮೊದಲ ವಿಮಾನಯಾನಕ್ಕೆ ಇಂದು ಚಾಲನೆ ನೀಡಲಾಗಿದೆ. ಗಾಜಿಯಾಬಾದ್‌ನ ಹಿಂಡಾನ್ ವಿಮಾನ ನಿಲ್ದಾಣದಿಂದ ಇಂದು ಬೆಳಗ್ಗೆ ೯.೩೦ಕ್ಕೆ ಜಮ್ಮುವಿಗೆ ಪ್ರಪ್ರಥಮ ಬಾರಿಗೆ ವಿಮಾನಯಾನ ಆರಂಭವಾಯಿತು. ಜಮ್ಮುವಿನ ಮಾತಾ ವೈಷ್ಣೋದೇವಿ ದೇವಸ್ಥಾನಕ್ಕೆ ತೆರಳುವವರು ಇನ್ನು ಮುಂದೆ ಎನ್‌ಸಿಆರ್‌ನಿಂದಲೇ ತೆರಳಬಹುದಾಗಿದ್ದು, ದೆಹಲಿ ವಿಮಾನ ನಿಲ್ದಾಣಕ್ಕೆ ಹೋಗುವ ಅವಶ್ಯಕತೆ ಇರುವುದಿಲ್ಲ.

<><><>

ರಾಷ್ಟ್ರೀಯ ಸ್ವಯಂ ಸೇವಕ ಸಂಘ - ಆರ್‌ಎಸ್‌ಎಸ್ ತನ್ನ ಸಂಸ್ಥಾಪನೆಯ ಶತಮಾನೋತ್ಸವ ಸಂದರ್ಭದಲ್ಲಿ ವಿವಿಧ ಜನಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆರ್‌ಎಸ್‌ಎಸ್ ಪ್ರಧಾನಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಬೆಂಗಳೂರಿನಲ್ಲಿ ಇಂದು ಅಖಿಲ ಭಾರತೀಯ ಪ್ರತಿನಿಧಿ ಸಭಾದ ಮೂರು ದಿನಗಳ ರಾಷ್ಟ್ರೀಯ ಸಮಾವೇಶದ ಸಮಾರೋಪ ಕಾರ್ಯಕ್ರಮದಲ್ಲಿ

ಈ ವಿಷಯ ತಿಳಿಸಿದ್ದಾರೆ. ಸಮಾಜದ ಉನ್ನತಿಗಾಗಿ ವಿವಿಧ ಚಟುವಟಿಕೆಗಳಲ್ಲಿ ಸಾಮಾಜಿಕ ಸಹಭಾಗಿತ್ವವನ್ನು ಈ ಕಾರ್ಯಕ್ರಮಗಳ ಮೂಲಕ ಪಡೆಯಲಾಗುವುದು ಎಂದು ಅವರು ಹೇಳಿದರು. ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಏಕತೆಗಾಗಿ ಮಂಡಲ ಮತ್ತು ಬಸ್ತಿ ಮಟ್ಟದಲ್ಲಿ ಜನಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದರು.

ಧ್ವನಿ : ದತ್ತಾತ್ರೇಯ ಹೊಸಬಾಳೆ (೨೧ ಸೆಕೆಂಡ್‌ಗಳು)

ಔಪಚಾರಿಕ ಆಚರಣೆವಿರುವುದಿಲ್ಲ ಎಂದು ತಿಳಿಸಿರುವ ಅವರು, ಸಂಸ್ಥಾಪನಾ ದಿನ ಅಂದರೆ ಈ ವರ್ಷದ ವಿಜಯದಶಮಿ ದಿನದಂದು ಜನಸಂಪರ್ಕ ಕಾರ್ಯಕ್ರಮಗಳನ್ನು ಆರಂಭಿಸಲಾಗುವುದು ಎಂದರು.

<><><><>

ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಇಂದು ಇಬ್ಬರು ಮಹಿಳಾ ನಕ್ಸಲರನ್ನು ಸೇರಿ ೨೨ ನಕ್ಸಲರು ಶರಣಾಗತಿಯಾಗಿದ್ದಾರೆ. ಈ ನಕ್ಸಲರ ಸುಳಿವಿಗೆ ೧೧ ಲಕ್ಷ ಬಹುಮಾನ ಘೋಷಿಸಲಾಗಿತ್ತು. ಈಗ ಶರಣಾದ ಪ್ರತಿ ನಕ್ಸಲರಿಗೂ ಪುನರ್‌ವಸತಿಗಾಗಿ ೨೫ ಸಾವಿರ ಪ್ರೋತ್ಸಾಹ ಧನ ನೀಡಲಾಯಿತು.

<><><><>

ದಕ್ಷಿಣ ಕೋರಿಯಾದ ಆಗ್ನೇಯಾ ವಲಯದಲ್ಲಿ ಭಾರೀ ಪ್ರಮಾಣದಲ್ಲಿ ಕಾಡ್ಗಿಚ್ಚು ವ್ಯಾಪಿಸಿದ್ದು, ಅಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಕಾಡ್ಗಿಚ್ಚಿನಲ್ಲಿ ಸಿಲುಕಿ ಕನಿಷ್ಟ ಐವರು ಮೃತಪಟ್ಟಿದ್ದು, ಅಪಾರ ಪ್ರಮಾಣದ ಹಾನಿ ಸಂಭವಿಸಿದೆ. ಗಿಯಾಂಗ್ ಸ್ಯಾಂಗ್‌ನ ಉತ್ತರ ಮತ್ತು ದಕ್ಷಿಣ ಪ್ರದೇಶ ಹಾಗೂ ಆಗ್ನೇಯಾ ಭಾಗದ ಉಲ್ಸಾನ್‌ನಲ್ಲಿ ಕಾಡ್ಗಿಚ್ಚು ವ್ಯಾಪಿಸಿದ್ದು, ಅಪಾರ ಹಾನಿ ಉಂಟಾಗಿದೆ ಎಂದು ಆಂತರಿಕ ಸಚಿವಾಲಯ ತಿಳಿಸಿದೆ. ಕಾಡ್ಗಿಚ್ಚು ನಿಯಂತ್ರಣಕ್ಕೆ ತರಲು ನೂರಾರು ಅಧಿಕಾರಿಗಳು ಹಾಗೂ ಅಗ್ನಿಶಾಮಕ ದಳ ಸತತ ಪ್ರಯತ್ನ ನಡೆಸಿವೆ. ಪ್ರಮುಖ ನಗರಗಳಾದ ಭೂಸಾನ್ ಮತ್ತು ಧೇಜಾನ್ ಸೇರಿದಂತೆ ೧೨ ಪ್ರಮುಖ ತಾಣಗಳಲ್ಲಿ ಅತಿ ತೀವ್ರ ಮಟ್ಟದ ಅಗ್ನಿ ಮುನ್ನೆಚ್ಚರಿಕೆ ನೀಡಲಾಗಿದೆ. ಈ ತಾಣಗಳಿಗೆ ಸಂಪರ್ಕ ನೀಡುವ ಎಲ್ಲ ಹೆದ್ದಾರಿ ವಿಭಾಗಗಳಲ್ಲಿ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ ಎಂದು ಕೋರಿಯಾ ಅರಣ್ಯ ಸೇವ ಇಲಾಖೆ ತಿಳಿಸಿದೆ.

<><><><>

ನವದೆಹಲಿಯಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ಪ್ಯಾರಾ ಗೇಮ್ಸ್‌ನಲ್ಲಿ ಶೂಟರ್‌ಗಳು ಮತ್ತು ಪ್ಯಾರಾ ಬಿಲ್ಲುಪಟುಗಳು ಉತ್ಕೃಷ್ಟ ಕೌಶಲ್ಯವನ್ನು ಪ್ರದರ್ಶಿಸಿದರು. ಡಾ. ಕರ್ಣಿ ಸಿಂಗ್, ಶೂಟಿಂಗ್

ಮೈದಾನದಲ್ಲಿ ನಡೆದ ಪಂದ್ಯಗಳಲ್ಲಿ ಸುಮೇಧಾ ಪಾಠಕ್ ೧೦ ಮೀಟರ್ ಮಹಿಳಾ ಏರ್‌ಪಿಸ್ತೂಲ್ ವಿಭಾಗದಲ್ಲಿ ಚಿನ್ನವನ್ನು ತಮ್ಮದಾಗಿಸಿಕೊಂಡಿದ್ದಾರೆ. ರುಬಿನಾ ಫ್ರಾನ್ಸಿಸ್ ಬೆಳ್ಳಿ ಪಡೆದರೆ, ಅನಿತಾ ಕುಮಾರಿ ಕಂಚಿನ ಪದಕವನ್ನು ಗೆದ್ದುಕೊಂಡರು. ಇದಕ್ಕೂ ಮುನ್ನ ನಡೆದ ೧೦ ಮೀಟರ್ ಏರ್‌ರೈಫಲ್ ಮಿಶ್ರ ವಿಭಾಗದಲ್ಲಿ ಸಾಗರ್ ಬಾಳಾಸಾಹೇಬ್ ಕಠಾಲೆ ಚಿನ್ನವನ್ನು ಗೆದ್ದುಕೊಂಡರೆ, ಮೋನಾ ಅಗರ್‌ವಾಲ್ ಬೆಳ್ಳಿ ಮತ್ತು ದೀಪಕ್ ಸೈನಿ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಬೆಳ್ಳಿ ಗೆದ್ದ ರುಬಿನಾ ಫ್ರಾನ್ಸಿಸ್ ಆಕಾಶವಾಣಿಯೊಂದಿಗೆ ಮಾತನಾಡಿ, ದೇಶದ ಕ್ರೀಡಾ ಪಯಣವನ್ನು ನಿರ್ಧರಿಸುವಲ್ಲಿ ಸರ್ಕಾರದ ಯೋಜನೆಗಳು ಪ್ರಮುಖ ಪಾತ್ರವಹಿಸುತ್ತದೆ ಎಂದರು.

**ಧ್ವನಿ : ರುಬಿನಾ ಫ್ರಾನ್ಸಿಸ್**

ಇದೇ ವೇಳೆ ಜೆಎಲ್‌ಎನ್ ಕ್ರೀಡಾಂಗಣದಲ್ಲಿ ಪ್ಯಾರಾ ಬಿಲ್ಲುಗಾರಿಕೆ ಪಂದ್ಯಗಳು ಮುಕ್ತಾಯಗೊಂಡವು. ಪ್ಯಾರಾ ಒಲಿಂಪಿಕ್ ಪ್ರಶಸ್ತಿ ವಿಜೇತೆ ಶೀತಲ್ ದೇವಿ, ಸಂಯುಕ್ತ ಮಹಿಳಾ ಮುಕ್ತ ವಿಭಾಗದಲ್ಲಿ ಚಿನ್ನ, ಪಾಯಲ್ ನಾಗ್ ಬೆಳ್ಳಿ ಮತ್ತು ಜ್ಯೋತಿಯವರು ಕಂಚನ್ನು ಗೆದ್ದುಕೊಂಡರು. ಸಂಯುಕ್ತ ಪುರುಷರ ಮುಕ್ತ ವಿಭಾಗದಲ್ಲಿ ಶ್ಯಾಮ್‌ಸುಂದರ್ ಸ್ವಾಮಿ ಚಿನ್ನ, ತೋಮನ್ ಕುಮಾರ್ ಬೆಳ್ಳಿ ಹಾಗೂ ರಾಕೇಶ್‌ಕುಮಾರ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

<><><><>

ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್‌ನ ಮೊದಲ ಪಂದ್ಯದಲ್ಲಿ ಇಂದು ರಾಜಸ್ತಾನ್ ರಾಯಲ್ಸ್ ವಿರುದ್ಧ ಸನ್ ರೈಸರ್ಸ್ ಹೈದರಾಬಾದ್ ೪೪ ರನ್‌ಗಳ ಜಯಗಳಿಸಿದೆ. ಗೆಲ್ಲಲು ೨೮೭ ರನ್‌ಗಳ ಗುರಿ ಬೆನ್ನತ್ತಿದ ರಾಜಸ್ತಾನ್ ರಾಯಲ್ಸ್ ತಂಡ ೨೦ ಓವರ್‌ಗಳಲ್ಲಿ ೬ ವಿಕೆಟ್ ಕಳೆದುಕೊಂಡು ೨೪೨ ರನ್ ಮಾಡಿತು. ಇಂದಿನ ೨ನೇ ಪಂದ್ಯದಲ್ಲಿ ಚೆನ್ನೈ ಸೂಪರ್‌ಕಿಂಗ್ಸ್ ಹಾಗೂ ಮುಂಬೈ ಇಂಡಿಯನ್ಸ್ ಮುಖಾಮುಖಿಯಾಗಿವೆ. ಚೆನ್ನೈ ಸೂಪರ್‌ಕಿಂಗ್ಸ್ ತಂಡ ಬೌಲಿಂಗ್ ಆಯ್ದುಕೊಂಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>